ಎಂ ಸಿ ನಂ.8/2025

ಪಿ.ಡಬ್ಲ್ಯೂ-1 ಶಿವಶರಣ ತಂದೆ ಬಾಬುರಾಯ ಖೇಡಗಿ

(ಇಂದು ದಿನಾಂಕಃ **20-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಎಸ್ ಪಿ ವಕೀಲರಿಂದ.

ನಮ್ಮ ಮದುವೆ 28-06-2012 ರಲ್ಲಿ ಆಗಿದೆ ಎಂದರೆ ಸರಿ. ಮದುವೆಯ ಸಮಯದಲ್ಲಿ ನನ್ನ ಹೆಂಡತಿಯ ಮನೆಯವರು ಸುಮಾರು ೩ ಲಕ್ಷ ರೂಪಾಯಿ ಖರ್ಚು ಮಾಡಿ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಎದುರುದಾರರಿಂದ ೩ ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ನನ್ನ ಮಕ್ಕಳು ಈಗ ಏನು ಓದುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಟಿಪ್ಪರ್, ಟ್ರ್ಯಾಕ್ಟರ ಮತ್ತು ಜೆ ಸಿ ಬಿ ಚಾಲಕನಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಬೋಳಸುರ ಗ್ರಾಮದಲ್ಲಿ ನಮ್ಮ ಮನೆತನಕ್ಕೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ.

೨. ನಾನು ಈ ಕೇಸನ್ನು ಹಾಕುವ ಮೊದಲು ನನ್ನ ಹೆಂಡತಿಗೆ ಬಂದು ಬಾಳುವೆ ಮಾಡು ಎಂದು ಕೇಳಿ ವಕೀಲರ ಮೂಲಕ ನೋಟಿಸು ಕಳುಹಿಸಿದ್ದೆ. ಸದರಿ ನೋಟಿಸನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮಕ್ಕಳು ನನ್ನ ಹೆಂಡತಿಯ ಹತ್ತಿರವೆ ಇರುತ್ತಾರೆ ಎಂದರೆ ಸರಿ. ನನ್ನ ಮಕ್ಕಳನ್ನು ಕೇಳಿ ನಾನು ನ್ಯಾಯಾಲಯಕ್ಕೆ ಅರ್ಜಿ ಹಾಕಿರುತ್ತೇನೆ. ಸದರಿ ಅರ್ಜಿಯ ಕುರಿತು ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆ ನನ್ನ ಮಕ್ಕಳಿಗೆ ಪಾಲು ಹೋಗಬಾರದು ಎಂಬ ಉದ್ದೇಶದಿಂದ ನನ್ನ ಅಣ್ಣನ ಹೆಂಡತಿಯ ಹೆಸರಿನಲ್ಲಿ ಖರೀದಿ ಪತ್ರ ಮಾಡಿದ ವಿಚಾರ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಪಾಲು ಕೇಳಿ ಇಂಡಿ ನ್ಯಾಯಾಲಯದಲ್ಲಿ ಕೇಸು ಹಾಕಿದ ವಿಚಾರ ನನಗೆ ಗೊತ್ತಿರುತ್ತದೆ.

೩. ೨೦೨೧ ರಲ್ಲಿ ನಮ್ಮ ತಂದೆ ನನ್ನ ಹೆಂಡತಿಯ ವಿರುದ್ದ ಕೆವಿಯಟ್ ಹಾಕಿದ ವಿಚಾರ ನನಗೆ ಗೊತ್ತಿಲ್ಲ. ನಾನು ಮತ್ತುನನ್ನ ಮನೆಯವರು ಸೇರಿಕೊಂಡು ಎದುರುದಾರರಾದ ನನ್ನ ಹೆಂಡತಿಯನ್ನು ಮತ್ತು ಅವರ ಮಕ್ಕಳನ್ನು ನೋಡಬಾರದು ಎಂಬ ಉದ್ದೇಶದಿಂದ ಈ ಕೇಸನ್ನು ಮತ್ತು ಕೆವಿಯಟನ್ನು ಸಲ್ಲಿಸಿದ್ದೇವು ಎಂದರೆ ಸರಿಯಲ್ಲ. ನನ್ನ ಹೆಂಡತಿಯನ್ನು ಹೊಡೆ-ಬಡೆ ಮಾಡಿದ್ದರಿಂದ ನನ್ನ ಹೆಂಡತಿ ತವರು ಮನೆಯಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನನ್ನ ಹೆಂಡತಿ ತನ್ನ ಮತ್ತು ಮಕ್ಕಳ ಉಪಜೀವನಕ್ಕಾಗಿ ಕೇಸು ನ್ಯಾಯಾಲಯದಲ್ಲಿ ಹಾಕಿರುತ್ತಾರೆ ಎಂದರೆ ಸರಿ. ನಾನು ಹಣ ನೀಡಬಾರದು ಎಂಬ ಉದ್ದೇಶದಿಂದ ಈ ಕೇಸಿನಲ್ಲಿ ಮಾತ್ರ ಹಾಜರಾಗಿ ಸದರಿ ಜೀವನಾಂಶದ ಕೇಸಿನಲ್ಲಿ ಹಾಜರಾಗುವುದಿಲ್ಲ ಎಂದರೆ ಸರಿಯಲ್ಲ.

೪. ನನ್ನ ಹೆಂಡತಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಒಂದು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.